ಬಂಟ್ವಾಳ ತಾಲ್ಲೂಕಿನದ್ದು, ನನ್ನ ಕ್ಷೇತ್ರ, ಗುರುವಾಯನ ಕೆರೆಯಿಂದ ಅಲ್ಲಿಗೆ ಲೈನ್ ಬರಬೇಕು, ಆ ಲೈನಿಗೆ ಸಿಂಗಲ್ ಟೆಂಡರ್ ಎಲ್. ಅಂಡ್ ಟಿ ಯವರು ಹಾಕಿದ್ದಾರೆ. ಅದು ಸಿಂಗಲ್ ಟೆಂಡರ್ ಎಂದು ಸರ್ಕಾರ ಅದಕ್ಕೆ ಅನುಮತಿ ನೀಡಿಲ್ಲ. ಇವತ್ತು ಕರ್ನಾಟಕ ಸರ್ಕಾರದ ಬಹಳಷ್ಟು ಕೆಲಸಗಳಲ್ಲಿ ಎಲ್. ಅಂಡ್ ಟಿ ಮಾಡುತ್ತಿರುವಾಗ ಸಿಂಗಲ್ ಟೆಂಡರ್ ಆಗಿದ್ದರೂ ಅದಕ್ಕೆ ಮಾನ್ಯತೆ ಕೊಟ್ಟು ಕೆಲಸವನ್ನು ಆದಷ್ಟು ಬೇಗ ಮಾಡಿಸಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ

ಶಿಕಾರಿಪುರ ತಾಲ್ಲೂಕಿನ ಅಂಬಳಿಹಳ ಜಲಾಶಯ ತುಂಬಿ ಕೆಲವು ಹಳ್ಳಿಗಳು ಮುಳುಗಿ ಹೋಗಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಈ ವಿಷಯ ಬೇರೆ, ಜಲಸಂಪನ್ಮೂಲ ಸಚಿವರು ತಾವು ಇರಲಿಲ್ಲ, ಇವತ್ತೊಂದು ವಿಶೇಷವಾದ ಸಮಾರಂಭದಲ್ಲಿ ತಾವಿದ್ದಿರಿ ಎಂದು ನಾನು ಎಂ.ಪಿ. ಪ್ರಕಾಶ್ ಇದ್ದಾಗ ಪ್ರಸ್ತಾಪ ಮಾಡಿದೆ. ಶಿಕಾರಿಪುರದ ತಾಲ್ಲೂಕಿನಲ್ಲಿ ಅಂಬ್ಳಿಗೊಳ್ಳ ಡ್ಯಾಂ ಬಹಳ danger ಪರಿಸ್ಥಿತಿಗೆ ಬಂದು ಅಲ್ಲಿ ಬಲಭಾಗದಲ್ಲಿರುವಂಥ ಸ್ಲೂಯಿಸ್ ಸುಮಾರು ಒಂಭತ್ತು ಅಡಿ ಪೂರ್ತಿ ಕಿತ್ತುಕೊಂಡು ಹೋಗಿ ಅಲ್ಲಿರುವ ಅಧಿಕಾರಿಗಳೆಲ್ಲಾ ಸೇರಿ ಮುನ್ನೂರು ನಾನೂರು ಮೂಟೆ ಮರಳು ತುಂಬಿ ಚೀಲಗಳನ್ನು ತುಂಬಿದ್ದಾರೆ. ಅದಕ್ಕೆ ಹದಿನೈದು ಇಪ್ಪತ್ತು ಸಾವಿರ ಚೀಲವಾದರೂ ಬೇಕು. ಎರಡನೆಯದು, ಒಂದು ಅಡಿ ನೀರು ಮೇಲುಗಡೆ, ಕೋಡಿ ಮೇಲೆ ಹೋಗುತ್ತಿದೆ. ಅದು ಯಾವ ಸಮಯದಲ್ಲಿ ಬೇಕಾದರೂ ಬ್ರೀಚ್ ಆಗಬಹುದು, ಇದರ ಪರಿಣಾಮ 25–30 ಅಡಿ ಮುಳುಗಿಹೋಗುತ್ತದೆ. ನಿಮ್ಮ ಎಕ್ಸಿಕ್ಯುಟೀವ್ ಇಂಜಿನಿಯರ್ ಏನು ತೀರ್ಮಾನ ತೆಗೆದುಕೊಳ್ಳಲು ಆಗುತ್ತಿಲ್ಲ. ಸುಮಾರು ಮೂರುವರೆ ನಾಲ್ಕುಗಂಟೆಯಲ್ಲಿ ನಾನು ಹೌಸ್‌ನಲ್ಲಿ ಪ್ರಸ್ತಾಪ ಮಾಡಿದೆ, ನಾನು ಹೊರಡುವ ಮೊದಲು ಅಲ್ಲಿ ಏನಾಗಿದೆ ನೋಡಿಕೊಂಡು ಹೋಗೋಣವೆಂದು wait ಮಾಡಿದೆ ಇಷ್ಟೊತ್ತು. ನಾನು ವಾಪಸ್ ವಿಷಯ ತಿಳಿದುಕೊಂಡರೆ, ನಿಮ್ಮ ಎಕ್ಸಿಕ್ಯುಟೀವ್ ಇಂಜಿನಿಯರ್ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ. ಸುಮಾರು ಒಂದು ಅಡಿ ನೀರು ಕೋಡಿ ಮೇಲೆ ಹರಿದು ಹೋಗುತ್ತಿದೆ. ಇದು ಯಾವ ಸಮಯದಲ್ಲಿ ಬೇಕಾದರೂ ಡ್ಯಾಮೇಜ್ ಆಗಬಹುದಾದ ಪರಿಸ್ಥಿತಿಯಲ್ಲಿದೆ. ಅದಕ್ಕೆ ಸೂಚನೆ ಕೊಟ್ಟು ಸರಿಪಡಿಸುತ್ತೇನೆ ಎಂದು ಹೇಳಿದ್ದರು, ನೀವೂ ಇದ್ದೀರಿ, ಸ್ವಲ್ಪ ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟು ನಿಮ್ಮ ಯಾರಾದರೂ ಅಲ್ಲಿ ಹೈಯರ್ ಅಥಾರಿಟೀಸ್ ಇದುವರೆಗೆ ಹೋಗಲಿಲ್ಲ. ಮಧ್ಯಾಹ್ನ ಎರಡೂವರೆ ಮೂರು ಗಂಟೆಯ ಮಧ್ಯೆ ನಾನು ಪ್ರಸ್ತಾಪ ಮಾಡಿದರೆ ಯಾರೂ ಇದನ್ನು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ. ನಿಮ್ಮ ಅಧಿಕಾರಿಗಳು ಯಾರು ಅಲ್ಲಿ ಸರಿಯಾದ ಡಿಸೀಷನ್ ತೆಗೆದುಕೊಳ್ಳುತ್ತಿಲ್ಲ. ಅನಾಹುತವಾಗುತ್ತದೆ, ಈಗ ಒಂದು ತಿಂಗಳ ಹಿಂದೆ ನಾನು ನಿಮ್ಮ ಇರಿಗೇಷನ್ ಸೆಕ್ರೆಟರಿಯನ್ನು ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದಿದ್ದೇನೆ, ಈ ರೀತಿ ಡ್ಯಾಮೇಜ್ ಆಗಬಹುದು, ತೊಂದರೆಯಾಗಬಹುದು ನೋಡಿ ಎಂದು, ಯಾರೂ ಏನು ಡಿಸೀಷನ್ ತೆಗೆದುಕೊಳ್ಳದೆಯೆ ಸುಮಾರು ಏಳೆಂಟು ಸಾವಿರ ಎಕರೆಗೆ ನೀರಾವರಿಯಾಗುವಂಥದ್ದು ಈಗ ಕೋಡಿಯೆ ಹೊಡೆಯುವಂಥ ಸ್ಥಿತಿಗೆ ಬಂದಿದೆ. ಯಾರೂ ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ. ದಯಮಾಡಿ ಅದನ್ನು ನೋಡಿ ಒಂದು ರಿಪೋರ್ಟ್ ತರಿಸಿಕೊಂಡು ಗಮನಕೊಡಿ. ನಾನು ಅಲ್ಲಿ ಹೋಗಿಬರುತ್ತೇನೆ. ಅಂಬ್ಳಿಗೊಳ ಜಲಾಶಯ ದಯವಿಟ್ಟು ಅದನ್ನು ನಿಮ್ಮ ಗಮನಕ್ಕೆ ತರುವುದು ಒಳ್ಳೆಯದು. ಇಲ್ಲದಿದ್ದರೆ ಅದರ ಪರಿಣಾಮ ವಿಶೇಷವಾಗಬಹುದೆಂದು ನಾ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರಿಗೆ ತಮಗೆ ಗೊತ್ತಿದ್ದಂತೆ ಅನೇಕ ಜಿಲ್ಲೆಗಳಲ್ಲಿ ಭಾರಿ ಮಳೆ ಬರುತ್ತಿದೆ. ಅದು ಬೆಳಗಾಂ ಜಿಲ್ಲೆ ಇರಬಹುದು ಶಿವಮೊಗ್ಗದಲ್ಲಿ, ಕೂರ್ಗ್‌ನಲ್ಲಿ, ಚಿಕ್ಕಮಗಳೂರು ಎಲ್ಲಾ ಕಡೆ heavy rains ಇವತ್ತು ಆಗಿದೆ. ಗುಲ್ಬರ್ಗಾದಲ್ಲಿ ಸಹ ಹೆಚ್ಚಿನ ಮಳೆಯಾಗಿ ಮೂರು ಜನ ಸತ್ತಿದ್ದಾರೆ. ಮನೆ ಕುಸಿದು ಬಿದ್ದಿದೆ. ಎಲ್ಲಾ ಕಡೆ ಭಾರಿ ಮಳೆಯಾಗುತ್ತಿದೆ. ಇದು ಒಂದು ಸಂತೋಷದ ಸುದ್ದಿ. ಆದರೆ ಆ ಮಳೆಯಿಂದಲೂ ಕೆಲವು ಕಡೆ ಡ್ಯಾಂಗಳು ಕೆರೆಗಳು ತೊಂದರೆಗೆ ಒಳಪಡತಕ್ಕ ಸಾಧ್ಯತೆ ಇದೆ. ಕೆಲವು ಕಡೆ ಕೆರೆಗಳು ಸಹ ಒಡೆದಿದೆ. ಅದಕ್ಕಾಗಿ ತಕ್ಷಣ ನಮ್ಮಲ್ಲಿ ಯಾವುದೇ ಹಣ ಇಲ್ಲದಿದ್ದರೂ ಕೂಡ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ತೆಗೆದುಕೊಂಡು ಅದನ್ನು ದುರಸ್ತಿ ಮಾಡುವುದರ ಬಗ್ಗೆ ನಾನೇ ಸ್ವತಃ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಮಾತನಾಡುತ್ತೇನೆ. ನಮ್ಮಲ್ಲಿ ಏನಾದರೂ ಫಂಡ್ ಅವೇಲಬಲ್ ಇದ್ದರೆ ತಕ್ಷಣ, Chief Engineer discretionನಲ್ಲಿ ಏನಾದರೂ ಅಮೌಂಟ್ ಇದ್ದರೆ ಅದನ್ನೂ ರಿಲೀಸ್ ಮಾಡಿಸಿ ಅದನ್ನು ದುರಸ್ತಿ ಮಾಡತಕ್ಕದ್ದರ ಬಗ್ಗೆ ಸಧ್ಯಕ್ಕೆ ನೀರು ಹೋಗದ ರೀತಿಯಲ್ಲಿ ಅಥವಾ ಮೇಜರ್ ಡ್ಯಾಮೇಜ್ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಈ ಸದನ ಮುಗಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ, ಸೂಚನೆ ಕೊಡುತ್ತೇನೆ ಮತ್ತು ಆದಷ್ಟು ಬೇಗನೆ ಕ್ರಮ ಜರುಗಿಸಲು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಹೇಳಿದಂತೆ ಇದು ಒಂದು ಪ್ರಮುಖವಾದ ಡ್ಯಾಂ ಒಡೆದುಹೋಗುವಂಥ ಸಂದರ್ಭ ಇದೆ, ಅದಕ್ಕೆ ಗಮನ ಕೊಡಬೇಕು, ಅದಕ್ಕೆ ದುಡ್ಡಿಲ್ಲ, ನೋಡುತ್ತೇವೆ ಎನ್ನತಕ್ಕ ಪ್ರಶ್ನೆ ಬರುವುದಿಲ್ಲ. ನಿಮ್ಮ ಅಧಿಕಾರಿಗಳು immediate rush ಆಗಬೇಕು. ಎಲ್ಲಾ ಕಡೆ ಕೆರೆಕಟ್ಟೆಗಳು ತುಂಬಿ ಕೋಡಿ ಒಡೆದುಹೋಗಿ ಏರಿಗಳು ಹೋಗಿ ಈ ರೀತಿ ಸಂದರ್ಭದಲ್ಲಿ within ಕೆಲವು ಗಂಟೆಗಳಲ್ಲಿ ಅಲ್ಲಿನ ಡಿ.ಸಿ. ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಿಮ್ಮ ಫ್ಲಡ್ ರಿಲೀಫ್‌ನಲ್ಲಿ ಹಣವನ್ನು ಕೊಟ್ಟು ತಕ್ಷಣ ಕೆಲಸ ಮಾಡಬೇಕೆಂದು ಸೂಚನೆ ಕೊಡಬೇಕಾಗುತ್ತದೆ. ಇಲ್ಲವೆಂದರೆ ನಾವು ಶಾಸಕರು ಇಲ್ಲಿದ್ದೇವೆ, ಅಲ್ಲಿ ಜನರು ಬೊಬ್ಬೆಯೊಡೆಯುತ್ತಿದ್ದಾರೆ, ಅಧಿಕಾರಿಗಳು ಡಿಸೀಷನ್ ತೆಗೆದುಕೊಳ್ಳಲು ಕೆಲಸ ಮಾಡಲು ಅವರ ಹತ್ತಿರ ದುಡ್ಡಿಲ್ಲ. ಇದೊಂದು ಉದಾಹರಣೆಯನ್ನು ನಾನು ಕೊಡುತ್ತಿದ್ದೆನೆಯೇ ಹೊರತು, ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಇಂಥದ್ದು ಇದೆ, ಒಂದು ಕಡೆ ಮಳೆ ಬಂತು ಕೆರೆಕಟ್ಟೆ ತುಂಬಿದೆ ಎಂದು ಸಂತೋಷ ಪಡುವುದು. ಇನ್ನೊಂದು ಕಡೆ ಈ ರೀತಿ ಡ್ಯಾಮೇಜ್ ಆಗುತ್ತಿದೆ, ತೊಂದರೆಯಾಗುತ್ತಿದೆ ಎಂದು ಇದನ್ನು ಉಳಿಸಿಕೊಳ್ಳುವುದರ ಕಡೆಯೂ ವಿಶೇಷ ಗಮನ ಕೊಡಬೇಕು. ಏಕೆಂದರೆ ನಾನು ಮೂರು ಗಂಟೆಯಲ್ಲಿ ಇದರ ಬಗ್ಗೆ ಮಾತನಾಡಿದರೂ ನಿಮ್ಮ ಹೈಯರ್ ಅಥಾರಿಟೀಸ್ ಹೋಗಿ ಒಂದು ಡಿಸೀಷನ್, ಟೆಕ್ನಿಕಲ್ ಹ್ಯಾಂಡ್ ಅವರು ತಾನೇ ತೀರ್ಮಾನ ತೆಗೆದುಕೊಳ್ಳಬೇಕು. ಒಂಭತ್ತು ಅಡಿ ಡ್ಯಾಮೇಜ್ ಆಗಿ ಆ ಸ್ಲೂಯಿಸ್ ಕಿತ್ತುಕೊಂಡು ಹೋಗುವಂಥ ಸಂದರ್ಭ ಇದೆ ಎಂದರೆ ಅದಕ್ಕೆ ತರಾತುರಿಯಲ್ಲಿ ಮಾಡದಿದ್ದರೆ ದೊಡ್ಡ ಅನಾಹುತವಾಗುತ್ತದೆ.

ಶ್ರೀ ಹೆಚ್. ಹಾಲಪ್ಪ: ನಮ್ಮ ಹೊಸನಗರ ಮತ್ತು ಶಿವಮೊಗ್ಗ ಗ್ರಾಮಾಂತರದಲ್ಲಿ ಕೂಡ ಫೋನ್ ಮಾಡಿದ್ದಾರೆ ಈಗಾಗಲೇ ಐದಾರು ಕೆರೆ ಒಡೆದುಹೋಗಿದೆ, ಅದರ ಬಗ್ಗೆ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು, ಮಲೆನಾಡಿನ ಎಲ್ಲಾ ತಾಲ್ಲೂಕುಗಳಲ್ಲಿ ಇದು ಆಗಿದೆ. ಅದು ಏನು ಮಾಡುತ್ತೀರಿ ಹೇಗೆ ಎಂದು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದಕ್ಕೆ ತಕ್ಷಣವಂತೂ ಯಾವುದನ್ನೂ ಏನು ಮಾಡಲು ಬರುವುದಿಲ್ಲ. ಕೆರೆಯದನ್ನೂ ಕೂಡ; ಮಳೆ ಕಡಿಮೆಯಾದ ಮೇಲಾದರೂ ದುರಸ್ತಿ ಮಾಡಬೇಕು ಇಲ್ಲದಿದ್ದರೆ ಸ್ವಲ್ಪವಾದರೂ ಕೆಲಸ ಮಾಡಬೇಕಾದರೂ ಬೇಕಲ್ಲಾ? ಇವರು ಹೇಳಿದ್ದು ಏನೆಂದರೆ, ಯಾವುದಾದರೂ ತಕ್ಷಣ ಉಸುಕಿನ ಚೀಲವನ್ನು ಹಾಕಿ ನಿಲ್ಲಿಸತಕ್ಕ ಸಾಧ್ಯತೆ ಇದ್ದರೆ ಅದನ್ನು ಮಾಡೋಣ. ತಮ್ಮಲ್ಲೂ ಕೂಡ ಅದೆ ಪರಿಸ್ಥಿತಿ ಇತ್ತು ಎಂದರೆ, ಫ್ಲಡ್ ರಿಲೀಫ್ ಫಂಡ್‌ನಲ್ಲಿ ಇರತಕ್ಕ ದುಡ್ಡನ್ನು ತಕ್ಷಣ ಬಿಡುಗಡೆ ಮಾಡುವುದಕ್ಕೆ ಹೇಳಿ, ಅದರ ಮೂಲಕ ಅದನ್ನು ದುರಸ್ತಿ ಮಾಡತಕ್ಕಂಥದನ್ನು ಮಾಡೋಣ.

ಶ್ರೀ ಹೆಚ್. ಹಾಲಪ್ಪ: ಶಿವಮೊಗ್ಗ ಜಿಲ್ಲೆಯ ಮುರ್ನಾಕು ತಾಲ್ಲೂಕುಗಳಲ್ಲಿ, ಮಲೆನಾಡಿನ ಎಲ್ಲಾ ಭಾಗದಲ್ಲೂ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವುದೇ ಜಿಲ್ಲೆ ಇರಲಿ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ.

ಶ್ರೀ ಹೆಚ್. ಹಾಲಪ್ಪ: ರಾಜ್ಯದಲ್ಲಿ ಅದರಲ್ಲೂ ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಜಾಸ್ತಿ ಮಳೆ ಆಗಿರುವುದರಿಂದ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹೌದು, ನಿಮ್ಮ ಜಿಲ್ಲೆಯಲ್ಲೆ ಭಾರಿ ಮಳೆಯಾಗಿದೆ, ಟಿ.ವಿ.ಯಲ್ಲೂ ತೋರಿಸುತ್ತಿದ್ದಾರೆ. ತಾವು ನೋಡಿದ್ದಿರೋ ಇಲ್ಲವೋ, ಸಾಕಷ್ಟು ಕಡೆ ಡ್ಯಾಮೇಜ್ ಆಗಿದೆ, ಹೆಚ್ಚಿನ ಮಳೆ ಬರುತ್ತಿದೆ ಎನ್ನತಕ್ಕದ್ದನ್ನು ನಾನು ನೋಡಿದೆ, ಅದಕ್ಕೆ ಫ್ಲಡ್ ರಿಲೀಫ್‌ನಲ್ಲೂ ಕೂಡ ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ಮುಖ್ಯಮಂತ್ರಿಯವರಿಗೆ ಈಗ ಮಾತನಾಡುತ್ತೇನೆ. ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೂ ಹೇಳುತ್ತೇನೆ, ಅವರ ಹತ್ತಿರ ಫ್ಲಡ್ ರಿಲೀಫ್‌ಗೆ ದುಡ್ಡು ಇರುತ್ತದೆ, ತಕ್ಷಣ ಬಿಡುಗಡೆ ಡೆಪ್ಯುಟಿ ಕಮೀಷನರ್‌ಗಳಿಗೆ ಮಾಡಬೇಕು, ರಿಪೋರ್ಟ್ ತರಿಸಿಕೊಂಡು ಆಮೇಲೆ ಬೇಕಾದರೆ ಹೆಚ್ಚಿನ ಹಣ ಬೇಕಾದರೆ ಕೊಡಲಿ, ತಕ್ಷಣ ಈಗ ಅವರಿಗೆ ವಾರ್ ಘಟ್ಟಿಂಗ್ ಬೇಸಿಸ್ ಮೇಲೆ ಇಂಥ ಕಡೆ ವ್ಯವಸ್ಥೆ ಮಾಡಲು ನಾನು ಹೇಳುತ್ತೇನೆ. ಸೆಷನ್ ಮುಗಿದ ಮೇಲೆ ನಾನು ತಕ್ಷಣ ಹೋಗಿ ಅದರ ವ್ಯವಸ್ಥೆ ಮಾಡುತ್ತೇನೆ.

9. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ: ಸರ್ಕಾರ ಕೃಷಿಕರ ಪರ ಎಂದು ಹೇಳುತ್ತಿದೆ. ಆದರೆ ನಮ್ಮ ಊರಿನಲ್ಲಿ ಕೃಷಿಕರ ಬೆನ್ನು ಮುರಿದುಹಾಕಿದ್ದಾರೆ. ನದಿ ನೀರು ಬಳಕೆದಾರರು ಹಾಗೂ ವಿದ್ಯುತ್ ಬಳಕೆದಾರರು ಸೇರಿ ಮೆರವಣಿಗೆ ಮಾಡಿ ಮನವಿಯನ್ನೆಲ್ಲಾ ಕೊಟ್ಟಿದ್ದರು. ಕೆ.ಇ.ಬಿ.ಗೆ ಮನವಿ ಕೊಡಲು ಬಂದಾಗ ಪೊಲೀಸರು ಏಕಾಏಕಿ ಲಾಠಿಚಾರ್ಜ್ ಮಾಡಿ 15 ಮಂದಿಗೆ ಪೆಟ್ಟಾಗಿದೆ. ಆದರೆ ಪೆಟ್ಟು ತಿಂದವರೂ ರೈತರು, ಕೇಸು ಹಾಕಿದ್ದೂ ರೈತರ ಮೇಲೆ, ಏಕೆಂದರೆ ಸಾರ್ವಜನಿಕ ಸ್ವತ್ತು ಹಾಳುಮಾಡಿದ್ದಾರೆಂದು, ಅದರ ಸಿ.ಡಿ. ನನ್ನಲ್ಲಿದೆ, ಉದಯ ಟಿ.ವಿ. ಯವರು ಮಾಡಿರುವ ಕ್ಯಾಸೆಟ್ ಇದೆ, ಆ ಸಿ.ಡಿ.ಯಲ್ಲಿ ಸರಿಯಾಗಿ ಕಾಣುತ್ತಿದೆ, ಗೇಟು ಪೊಲೀಸ್‌ನವರೇ ಎತ್ತಿದಾಗ ಪೊಲೀಸ್‌ನವರ ಮೇಲೆ ಗೇಟು ಬಿದ್ದು ಅವರಿಗೆ ಗಾಯವಾದದ್ದು, ಆದರೆ ರೈತರ ಮೇಲೆ ಕೇಸು ಹಾಕಿದ್ದಾರೆ. ಮಾನವ ಹಕ್ಕು ಆಯೋಗಕ್ಕೆ ರೈತರು ಹೋಗಿದ್ದಾರೆ. ಅದರ ಬಗ್ಗೆ ಸರ್ಕಾರದ ಗಮನಸೆಳೆಯುತ್ತಿದ್ದೇನೆ.